aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Kannada Second Language (Paper 3) Key Answers

EXAM	YEAR	TYPE	SUBJECT
Karnataka Class 10	2027	Answer Key	Kannada

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

ಮಾದರಿ ಉತ್ತರಗಳು–ಪತ್ರಿಕೆ–03

MODEL ANSWERS - PAPER-03

ವಿಷಯ : ದ್ವಿತೀಯ ಭಾಷೆ ಕನ್ನಡ

SUBJECT : Second Language Kannada

ಸಮಯ : 3 ಗಂಟೆ | **ವಿಷಯ ಸಂಕೇತ : 33K**

ಗರಿಷ್ಠ ಅಂಕಗಳು : 80 | **Subject Code : 33K**

ಪ್ರಶ್ನೆ ಸಂಖ್ಯೆ	ಪ್ರಶ್ನಾನುಸಾರ ಮೌಲ್ಯಮಾಪನ	ಅಂಕಗಳು
I	**ಬಹುಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**	4x1=4
1.	1. **'ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ :** ಎ) ೦೯ ಬಿ) ೧೩ ಸಿ) ೦೨ ಡಿ) ೦೫ **ಉತ್ತರ :** ಡಿ) ೦೫	
2.	2. 'ದಿಗ್ವಾಚಕ' ಪದವಿದು : ಎ) ನದಿ ಬಿ) ಎಂತಹ ಸಿ) ಮೂಡಣ ಡಿ) ಹಲವು ಉತ್ತರ : ಸಿ) ಮೂಡಣ	
3.	3. **'ಪುಸ್ತಕದಲ್ಲಿ'** ಪದದಲ್ಲಿರುವ ವಿಭಕ್ತಿ ಎ) ದ್ವಿತೀಯಾ ಬಿ) ಸಪ್ತಮಿ ಸಿ) ಷಷ್ಠಿ ಡಿ) ಚತುರ್ಥಿ ಉತ್ತರ : ಬಿ) ಸಪ್ತಮಿ	
4.	4. ಆಗಮ ಸಂಧಿಗೆ ಉದಾಹರಣೆಯಾಗಿರುವ ಪದ : ಎ) ಗುರುವನ್ನು ಬಿ) ಮಾತಿಲ್ಲ ಸಿ) ಮಳೆಗಾಲ ಡಿ) ದೇವಾಲಯ **ಉತ್ತರ :** ಎ) ಗುರುವನ್ನು	
II	**ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)**	12x1=12
5.	**5. ಶ್ರೀಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?** **ಉತ್ತರ :** ಶ್ರೀಪಂಡಿತಾರಾಧ್ಯ ಶಿವಾಚಾರ್ಯರು 'ರಂಗಜಂಗಮ'ರೆಂದು ಖ್ಯಾತರಾಗಿದ್ದಾರೆ.	
6.	**6. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?** **ಉತ್ತರ :** ಪುಟ್ಟರಾಜರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು.	
7.	**7. ಸಸ್ತನಿಗಳ ಆಶ್ರಯದಾಣಗಳು ಯಾವುವು?** **ಉತ್ತರ :** ಉತ್ತರ : ಗುಹೆ, ಪೊಟರೆ, ಗೂಡು, ಬಿಲ ಇವು ಸಸ್ತನಿಗಳ ಆಶ್ರಯದಾಣಗಳಾಗಿವೆ.	
8.	**8. ಹ್ಯೂಯೆನ್‌ತ್ಸಾಂಗ್ ಹರಿದ್ವಾರವನ್ನು ಏನೆಂದು ಕರೆದಿದ್ದಾನೆ?** **ಉತ್ತರ :** ಹ್ಯೂಯೆನ್‌ತ್ಸಾಂಗ್ ಹರಿದ್ವಾರವನ್ನು ಮೆಯುಲೊ ಅಥವಾ ಮಯೂರ ಎಂದು ಕರೆದಿದ್ದಾನೆ.	

9.	9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು? **ಉತ್ತರ :** ಗೋಪಾಲನ ಪೂಜೆಗೆ ಹೂವುಗಳನ್ನು ತರುವುದು ಇವನ ಕೆಲಸವಾಗಿತ್ತು.	
10.	10. ಹಾ, ಮಾ, ನಾಯಕರ ಪ್ರಕಾರ ಸೌಜನ್ಯ ಹೇಗೆ ಅರಳಬೇಕು? **ಉತ್ತರ :** ಹಾ, ಮಾ, ನಾಯಕರ ಪ್ರಕಾರ ಸೌಜನ್ಯವು ಹೂವು ಅರಳಿದಂತೆ ಅರಳಬೇಕು ಎಂದಿದ್ದಾರೆ.	
11.	11. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ? **ಉತ್ತರ :** ಚೈತ್ರದಲ್ಲಿ ಖಗ, ಪಕ್ಷಿ, ಪ್ರಾಣಿಗಳ ಧ್ವನಿ ನೆಲಮುಗಿಲ ವಾಲಗದಂತೆ ನಡೆದಿರುತ್ತದೆ.	
12.	12. ಕವಿ ಸಿ.ಪಿ.ಕೆ ಅವರು ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಹೇಳಿದ್ದಾರೆ? **ಉತ್ತರ :** ನಮ್ಮ ಕರ್ತ್ಯಗಳನ್ನು ಕವಿ ಶಾಂತ ರೀತಿಯಿಂದ ಸದ್ದುಗದ್ದಲವಿಲ್ಲದೆ ಮಾಡಿ ಮುಗಿಸಬೇಕೆಂದು ಹೇಳಿದ್ದಾರೆ.	
13.	13. ಜನಪದರ ಪ್ರಕಾರ ಕುಣಿಗಲ್ ಕೆರೆಯು ಹೇಗೆ ಬಾಗಿದೆ? **ಉತ್ತರ :** ಜನಪದರು ಕುಣಿಗಲ್ ಕೆರೆಯು ಬಾಳೆಯ ಹಣ್ಣಿನಂತೆ ಬಾಗಿದೆ ಎಂದು ಹೇಳಿದ್ದಾರೆ.	
14.	14. ಬೆಟ್ಟದ ಮೇಲೆ ಮನೆಯ ಮಾಡಿದರೆ ಯಾವುದಕ್ಕೆ ಅಂಜಬಾರದು ಎಂದು ಅಕ್ಕಮಹಾದೇವಿ ಹೇಳಿದ್ದಾರೆ? **ಉತ್ತರ :** ಬೆಟ್ಟದ ಮೇಲೆ ಮನೆಯ ಮಾಡಿದರೆ ಮೃಗಗಳಿಗೆ ಅಂಜಬಾರದು ಎಂದು ಅಕ್ಕಮಹಾದೇವಿ ಹೇಳಿದ್ದಾರೆ	
15.	15. ಬಸವಣ್ಣನವರ ವಚನಗಳ ಅಂಕಿತನಾಮ ಯಾವುದು? **ಉತ್ತರ :** ಬಸವಣ್ಣನವರ ವಚನಗಳ ಅಂಕಿತನಾಮ 'ಕೂಡಲಸಂಗಮದೇವ'	
16.	16. ಅರ್ಜುನನು ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ಎಂದನು? ಉತ್ತರ : ಅರ್ಜುನನು ಧುರಕ್ಕೆ ಬೆನ್ನು ಹಾಕಿದರೆ ಪಾಪ (ಪಾತಕ) ಪ್ರಾಪ್ತಿಯಾಗುತ್ತದೆ ಎಂದನು.	

III	**ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು.** **(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು)**	8x2=16
17.	17. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು? **ಉತ್ತರ :** ಸರ್ವಜ್ಞ ಕವಿಯು ಕೃಷಿಯನ್ನು ಕುರಿತು **"**ಕೋಟಿವಿದ್ಯಗಳಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೇ ಕೆಡಗುಂ**"** ಎಂದಿರುವುದು ಗಮನಾರ್ಹ ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು. ಆ ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಕೃಷಿಯ ಮಹತ್ವವನ್ನು ತಿಳಿಸಿದ್ದಾರೆ.	
18.	18. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ವಿವರಿಸಿ. ಉತ್ತರ : ಹಕ್ಕಿಗಳು ತಮಗಿರುವ ಅಪೂರ್ವವಾದ ಹಾರಾಟದ ಶಕ್ತಿಯಿಂದ ಸಾಗರದ್ವೀಪ, ಗಿರಿಶಿಖರಗಳ ನೆತ್ತಿ, ನಿರ್ಜನವನಶ್ರೇಣಿ, ಕಗ್ಗತ್ತಲ ಕಣಿವೆ, ಹಿಮಶೀತಲ ಧ್ರುವ ಪ್ರದೇಶ ಎಲ್ಲೆಂದರಲ್ಲಿ ಗೂಡುಗಳನ್ನು ನಿರ್ಮಿಸುತ್ತವೆ.	

19.	19. ಮಹಾಭಾರತದಲ್ಲಿ ಗಂಗಾದ್ವಾರದ ಬಗ್ಗೆ ಉಲ್ಲೇಖಿಗೊಂಡಿರುವ ಪ್ರಸಂಗಗಳನ್ನು ತಿಳಿಸಿ. ಉತ್ತರ ಃ ಗಂಗಾದ್ವಾರದಲ್ಲಿ ಶಂತುವಿನ ತಂದೆ ಪ್ರದೀಪನು ತಪಸ್ಸಾನ್ನಾಚರಿಸಿದನು. ದ್ರೋಣನ ತಂದೆ ಭಾರದ್ವಾಜನು ಅಪ್ಸರೆಯಾದ ಘೃತಾಚಿಯನ್ನು ಕಂಡು ಮೋಹಗೊಂಡು ದ್ರೋಣಚಾರ್ಯನ ಹುಟ್ಟಿಗೆ ಕಾರಣನಾದದ್ದು ಇಲ್ಲಿಯೇ. ಅರ್ಜುನನು ತನ್ನ ತೀರ್ಥಯಾತ್ರೆ ಸಂದರ್ಭದಲ್ಲಿ ನಾಗಲೋಕದ ಕನ್ಯೆ ಉಲೂಪಿಯನ್ನು ವರಿಸಿದ್ದು ಇದೇ ಸ್ಥಳದಲ್ಲಿ. ಇವು ಮಹಾಭಾರತದಲ್ಲಿ ಉಲ್ಲೇಖಿಗೊಂಡ ಪ್ರಸಂಗಗಳಾಗಿವೆ.	
20.	20. ಅಸೌಜನ್ಯ ನಡವಳಿಕೆಗೆ ಎರಡು ಉದಾಹರಣೆ ಕೊಡಿ. **ಉತ್ತರ ಃ** ತಮ್ಮ ಬಳಿಗೆ ಬಂದವರ ಬಗ್ಗೆ ಅನೇಕ ಜನರು ಆದರ ಮತ್ತು ತಾಳ್ಮೆಯನ್ನು ತೋರುವುದಿಲ್ಲ. ಎರಡು ಒಳ್ಳೆಯ ಮಾತುಗಳನ್ನು ಆಡುವುದಿಲ್ಲ. ಯಾವಾಗಲೂ ಮುಖ ಗಂಟು ಹಾಕಿಕೊಂಡಿರುತ್ತಾರೆ. ದೈನ್ಯತೆಯಿಂದ ಮತ್ತೆ ಮತ್ತೆ ಕೇಳಿಕೊಂಡರೂ ಅವರಿಗೆ ಉತ್ತರಿಸುವುದು ಧಣಿವಾಗುತ್ತದೆ. ಇವು ಅಸೌಜನ್ಯ ನಡವಳಿಕೆಗೆ ಉದಾಹರಣೆಗಳಾಗಿವೆ.	
21.	21. ಕಬ್ಬಕ್ಕಿಗಳು ಬಾಯಿ ಬಿಡಲು ಕಾರಣವೇನು? **ಉತ್ತರ ಃ** ಕುಣಿಗಲ್ ಕೆರೆಯು ವಿಶಾಲವಾದ ಕೆರೆಯಾಗಿದೆ. ಅನೇಕ ಜೀವಿಗಳಿಗೆ ಆಶ್ರಯವನ್ನು ನೀಡಿದೆ. ಜನರ ಬದುಕಿನ ಆಧಾರವ ಆಗಿದೆ. ಅದರಲ್ಲಿರುವ ಚಿಕ್ಕ ಚಿಕ್ಕ ಜಲಚರಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯಿ ತೆರೆದು ಹಾರಾಡುತ್ತಿರುತ್ತವೆ. ಅದನ್ನು ಜನಪದರು ಕಬ್ಬಕ್ಕಿ ಬಾಯ ಬಿಡುತಾವೆ ಎಂದು ವರ್ಣಿಸಿ ಹೇಳಿದ್ದಾರೆ.	
22.	22. ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ? **ಉತ್ತರ ಃ** ಬಸವಣ್ಣನವರು ಉಳ್ಳವರು ಶಿವಾಳಯವನ್ನು ಕಟ್ಟುವರು ನಾನೇನು ಮಾಡಲಿ ಬಡವನಯ್ಯ ಎಂದು ಪ್ರಶ್ನಿಸುತ್ತಾರೆ. ಮುಂದುವರೆದು ನನ್ನ ಕಾಲುಗಳೇ ಕಂಬ, ದೇಹವೇ ದೇಗುಲ, ನನ್ನ ಶಿರವೇ ಹೊನ್ನ ಕಳಸವಾಗಿದೆ. ನಿರಾಕಾರ ಪರಮಾತ್ಮನು ನನ್ನ ಅಂತರಂಗದಲ್ಲಿದ್ದಾನೆ. ಆದ್ದರಿಂದ ಎನ್ನ ದೇಹವೇ ದೇಗುಲ ಎಂದು ಸ್ಪಷ್ಟೀಕರಿಸುತ್ತಾರೆ. ಉಳ್ಳವರು ಕಟ್ಟುವ ಸ್ಥಾವರದ ದೇಗುಲಕ್ಕೆ ಅಳಿವಿದೆ. ಆದರೆ ಜಂಗಮ ಎಂದರೆ ಸಮಾಜಕ್ಕೆ ಅಳಿವಿಲ್ಲವೆಂದು ಹೇಳಿರುವುದು ಅರ್ಥಪೂರ್ಣವಾಗಿದೆ.	
23.	23. ವೈದ್ಯರ ಮನೆಯಿಂದ ಕಳವಾದ ವಸ್ತುಗಳು ಮರಳಿ ಸಿಕ್ಕಿದ ಬಗೆಯನ್ನು ತಿಳಿಸಿ. ಉತ್ತರ ಃ ಕಳ್ಳರು ವೈದ್ಯರ ಮನೆಗೆ ಬಂದು ತಮ್ಮ ಹಟ್ಟಿಗೆ ಬಂದು ಭೀಮನಾಯಕನ ಮಗನನ್ನು ಉಪಚರಿಸಬೇಕು ಎಂದು ಕೇಳಿದರು. ಇವರು ಕಳ್ಳರು ಎಂಬುದು ಗೊತ್ತಿದ್ದರೂ ಜೀವಭಯವನ್ನು ಲೆಕ್ಕಿಸದೆ ಅವರೊಂದಿಗೆ ಹೋಗಿ ಭೀಮನಾಯಕನ ಮಗನನ್ನು ಉಪಚರಿಸಿ ಅವರ ಪ್ರಾಣವನ್ನು ಉಳಿಸಿದರು. ಇದರಿಂದ ಕಳ್ಳರ ಮನಃ ಪರಿವರ್ತನೆಯಾಯಿತು. ಕೃತಜ್ಞೆತೆಯಿಂದ ವೈದ್ಯರ ಮನೆಯಿಂದ ಕಳ್ಳತನ ಮಾಡಿದ ವಸ್ತುಗಳನ್ನು ಮರಳಿ ವೈದ್ಯರಿಗೆ ಒಪ್ಪಿಸಿದರು.	
24.	24. ಕವಿಯ ಅಭಿವ್ಯಕ್ತಿಯಲ್ಲಿ ಕನ್ನಡ ನಾಡಿನ ವಿಸ್ತಾರವೇನು? **ಉತ್ತರ ಃ** ಶ್ರೀ ವಿಜಯನು ಕವಿರಾಜಮಾರ್ಗ ಎಂಬ ಲಕ್ಷಣ ಗ್ರಂಥವನ್ನು ರಚಿಸಿದ್ದಾನೆ. ಅದರಲ್ಲಿ ಕನ್ನಡ ನಾಡಿನ ವಿಸ್ತಾರವನ್ನು ಕಾವೇರಿಯಿಂದ ಆ ಗೋದಾವರಿಯವರೆಗೆ ಹಬ್ಬಿದೆ ಎಂದು ಹೇಳಿದ್ದಾನೆ. ಈ ಕನ್ನಡಿಗರಿರುವ ಪ್ರದೇಶ ಭೂಮಂಡಲದ ಸುಂದರ ಪ್ರದೇಶಗಳಲ್ಲಿ ಒಂದಾಗಿದೆ ಎಂದು ಹೇಳಿರುವುದು ಗಮನಾರ್ಹವಾಗಿದೆ.	

IV 25.	**ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು:** **ಜನ್ಮಸ್ಥಳ, ಕಾಲ** **ಕೃತಿಗಳು, ಪ್ರಶಸ್ತಿಗಳು** **ವಾಕ್ಯ ರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ** **ಒಟ್ಟು** **25. 'ಸಿ ಪಿ ಕೃಷ್ಣಕುಮಾರ್'** **ಉತ್ತರ :** ಸಿ.ಪಿ.ಕೆ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ.ಚಿಕ್ಕನಾಯಕನಹಳ್ಳಿ ಪುಟ್ಟೇಗೌಡ ಕೃಷ್ಣಕುಮಾರ್ ಅವರು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ 1939ರಲ್ಲಿ ಜನಿಸಿದರು. ಇವರು ತಾರಾಸುಖ, ಅನಂತಪೃಥ್ವೀ, ಬೊಗಸೆ, ಕನ್ನಡ ಚತುರ್ಮುಖ, ಕಾವ್ಯಾರಾಧನಾ, ಜನಪದ ಪ್ರತಿಭೆ, ಪರಿಭಾವನೆ, ಸಾಹಿತ್ಯ ತತ್ವಗಳು, ಪಾಶ್ಚಾತ್ಯಕಾವ್ಯಚಿಂತನ, ಕನ್ನಡ ನಾಗಾನಂದ, ಕನ್ನಡ ರತ್ನಾವಳಿ ಮುಂತಾದ 300 ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಬಸವ ಸಾಹಿತ್ಯ ಶ್ರೀ, ವಿದ್ವತ್ ಶಿರೋಮಣಿ, ಹನಿಗವನ ಹರಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ತಜ್ಞ, ರಾಜ್ಯೋತ್ಸವ, ಚುಟುಕುರತ್ನ ಪ್ರಶಸ್ತಿಗಳು ದೊರೆತಿವೆ.	3x1=3 **1 ಅಂಕ** **1 ಅಂಕ** **1 ಅಂಕ** **3 ಅಂಕಗಳು**
V **26.**	**ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು:** ಪಠ್ಯಾಂಶಕ್ಕೆ ಪದ ಬಳಕೆ ಮತ್ತು ಶೈಲಿ ಒಟ್ಟು **26. ಧುರದ ಲೋಡಿದ ಪಾತಕವ ಭೂ** ಸುರರು ಕಳೆದಪರಶ್ವಮೇಧವ ಧರಣಿಯಲಿ ಪ್ರತ್ಯೇಕ್ಷವಾಗಿಯೂ ಮಾಡಬಹುದೆಮಗೆ ಸುರರ ಸತಿಯರನೊಲ್ಲೆವೆಮಗೆ ಮ್ಮರಸುತನವೆಮಗಿಂದ್ರ ಪದವಿಯು ಬಿಟ್ಟುಕಳುಹೆಂದ. ಉತ್ತರ : ಈ ಪದ್ಯಭಾಗವನ್ನು ಕುಮಾರವ್ಯಾಸನ ಕರ್ನಾಟಭಾರತ ಕಥಾಮಂಜರಿ ಅಥವಾ ಗದುಗಿನ ಭಾರತ ಕೃತಿಯ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಕೌರವನ ಸೇನೆಯನ್ನು ಕಂಡು ಜೀವಭಯದಿಂದ ಓಡಿ ಹೋಗುತ್ತಿರುವ ಉತ್ತರಕುಮಾರನನ್ನು ಅರ್ಜುನನು ತಡೆಯುತ್ತಾನೆ. ಯುದ್ಧಭೂಮಿಯಲ್ಲಿ ಶತ್ರುಗಳಿಗೆ ಬೆನ್ನು ತೋರಬಾರದು, ಯುದ್ಧ ಮಾಡು ನಡೆ ಎಂದು ಹಲವು ಆಮಿಷಗಳನ್ನು ಒಡ್ಡುತ್ತಾನೆ. ಅದಕ್ಕೆ ಉತ್ತರನು **"ಧುರಕ್ಕೆ** ಬೆನ್ನು ಹಾಕಿದ್ದರಿಂದ ಬರುವ ಪಾಪವನ್ನು ಭೂಸುರರಿಂದ ಅಶ್ವಮೇಧಯಾಗ ಮಾಡಿಸಿ ಕಳೆದುಕೊಳ್ಳತ್ತೇನೆ. ನನಗೆ ದೇವಲೋಕದ ಸ್ತ್ರೀಯರು ಬೇಕಿಲ್ಲ ನಮಗೆ ನಮ್ಮರಮನೆಯ ನಾರಿಯರೇ ಸಾಕು ನಮ್ಮರಸುತನವೇ ನಮಗೆ ಇಂದ್ರ ಪದವಿ. ನನ್ನನ್ನು ಬಿಟ್ಟು ಕಳುಹಿಸು**"** ಎಂದು ಗೋಗರೆಯುತ್ತಾನೆ. ಇಲ್ಲಿ ಉತ್ತರಕುಮಾರನ ಹೇಡಿತನ ಹಾಸ್ಯ ಪ್ರಸಂಗವಾಗಿ ಅಭಿವ್ಯಕ್ತಗೊಂಡಿದೆ.	3x1=3 1 ಅಂಕ 2 ಅಂಕ 3 ಅಂಕಗಳು

VI 27.	**ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು:** **ಅಲಂಕಾರವನ್ನು ಹೆಸರಿಸುವುದು** **ಲಕ್ಷಣ ಮತ್ತು ಸಮನ್ವಯಗೊಳಿಸುವುದು** **ಒಟ್ಟು** **27. 'ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ'** ಅಲಂಕಾರ : ಉಪಮಾಲಂಕಾರ ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುವರು. ಉಪಮೇಯ : – ಮಗುವಿನ ಮುಖ ಉಪಮಾನ : – ಚಂದ್ರ ಉಪಮಾವಾಚಕ : – ನಂತೆ(ಅಂತೆ) ಸಮಾನ ಧರ್ಮ : – ಮನೋಹರವಾಗಿರುವುದು. ಸಮನ್ವಯತೆ : ಉಪಮೇಯವಾದ 'ಮಗುವಿನ ಮುಖ'ವನ್ನು ಉಪಮಾನವಾದ 'ಚಂದ್ರನಿಗೆ' 'ಅಂತೆ' ಎಂಬ ಉಪಮಾವಾಚಕದ ಮೂಲಕ 'ಮನೋಹರವಾಗಿರುವುದು' ಎಂಬ ಸಮಾನಧರ್ಮದೊಂದಿಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.	3x1=3 1 ಅಂಕ 2 ಅಂಕ 3 ಅಂಕಗಳು

VII	ಗಾದೆಯನ್ನು ವಿಸ್ತರಿಸಿ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ) ಗಾದೆಯ ಮಹತ್ವದ ವಿವರಣೆ ಉದಾಹರಣೆಯೊಂದಿಗೆ ಅರ್ಥ ವಿವರಣೆ ಭಾಷಾ ಶೈಲಿಗೆ–ಪದಬಂಧಗಳಿಗೆ ಒಟ್ಟು	3x1=3 1 ಅಂಕ 1 ಅಂಕ 1 ಅಂಕ 3 ಅಂಕಗಳು
28	**28**. 'ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ' ಅಥವಾ 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ'	
VIII	ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು: ಕೃತಿ, ಕರ್ತೃ ಮತ್ತು ಪಠ್ಯದ ಹೆಸರು ಯಾರು–ಯಾರಿಗೆ ಸಂದರ್ಭ ಭಾಷಾ ಶೈಲಿ, ಪದಬಂಧಗಳಿಗೆ ಒಟ್ಟು	5x3=15 1 ಅಂಕ 1 ಅಂಕ 1 ಅಂಕ 3 ಅಂಕಗಳು
29.	29. "ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು" **ಉತ್ತರ :** ಈ ವಾಕ್ಯವನ್ನು ಅ.ರಾ, ಮಿತ್ರ ಅವರು ಬರೆದಿರುವ ಮಹಾಭಾರತಪಾತ್ರ– ಸಂಗತಿಗಳು ಕೃತಿಯಿಂದ ಆಯ್ದ ಒಣಮರದಗಿಳಿ ಎಂಬ ಪಾಠದಿಂದ ಆರಿಸಿದೆ. ಈ ಮಾತನ್ನು ಗಿಳಿ ಇಂದ್ರನಿಗೆ ಹೇಳುತ್ತದೆ. ಇಂದ್ರನು ಗಿಳಿಯನ್ನು ಇಂಥ ಒಣಮರದಲ್ಲಿ ಏಕೆ ವಾಸಮಾಡಿತ್ತಿದ್ದೀಯ ಎಂದು ಕೇಳಿದಾಗ "ಈ ಮರ ನನಗೆ ಹಲವಾರು ವರ್ಷಗಳಿಂದ ಆಶ್ರಯ ನೀಡಿದೆ. ಹಣ್ಣು ಕೊಟ್ಟಿದೆ. ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ. ದುರದೃಷ್ಟದಿಂದ ಮರವನ್ನು ರೋಗ ಬಡತನಗಳು ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಮರವನ್ನು ಬಿಟ್ಟು ಬೇರೆಕಡೆ ಹೋಗಿ ಕೃತಘ್ನನಾಗಲು ನನಗೆ ಇಷ್ಟವಿಲ್ಲ ಎಂದು ಹೇಳಿತು. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ದುರ್ಭರಗಳಿಗೆಯಲ್ಲಿಯೂ ಅವರೊಡನಿದ್ದು ಉಪಕಾರ ಸ್ಮರಣೆ ಮಾಡಬೇಕು. ಅದಕ್ಕೂ ಒಳ್ಳೆಯ ದಿನ ಬರಲಿ ಎಂದು ಹಾರೈಸಬೇಕು ಎಂದು ತನ್ನ ತತ್ವನಿಷ್ಠೆಯನ್ನು ತಿಳಿಸಿತು. ಇಲ್ಲಿ ಗಿಳಿಯ ತತ್ವನಿಷ್ಠೆ ಮೆಚ್ಚುವಂತದ್ದಾಗಿದೆ.	
30.	**30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ"** ಉತ್ತರ : ಈ ವಾಕ್ಯವನ್ನು ರಮೇಶಗೌಡ ಎಂ,ಕೆ ಅವರು ಬರೆದಿರುವ ಗಾನಯೋಗಿ ಡಾ. ಪುಟ್ಟರಾಜ ಗವಾಯಿಗಳು ಎಂಬ ಜೀವನ ಚರಿತ್ರೆಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಚಂದ್ರಶೇಖರಯ್ಯನವರು ಪುಟ್ಟಯ್ಯನಿಗೆ ಹೇಳುತ್ತಾರೆ. ಬಾಲಕ ಪುಟ್ಟಯ್ಯ ಮನೆಯಲ್ಲಿ ಯಾರು ಇಲ್ಲದಾಗ ಮಾವನ ಹಾರ್ಮೋನಿಯಂ ತೆಗೆದು ನುಡಿಯಲಾರಂಭಿಸಿದ. ಪುಟ್ಟಯ್ಯನ ಗಾನ ಮಾಧುರ್ಯಕ್ಕೆ ಮನೆಯ ಒಳಗೆ ಹೊರಗೆ ಜನರು ನೆರೆದಿದ್ದರು. ಹೊಲದಿಂದ ಮನೆಗೆ ಬಂದ ಚಂದ್ರಶೇಖರಯ್ಯನವರು ನಮ್ಮ ಮನೆಯಲ್ಲಿ ಹಾರ್ಮೋನಿಯಮ್ ನುಡಿಸುತ್ತಿದ್ದವರು ಯೋಗಿಗಳೇ ಇರಬೇಕೆಂದು ಭಾವಿಸಿ ಒಳ ಬಂದರು. ಮಾನವ ಪಾದ ಸಪ್ಪಳದಿಂದ ವಿಚಲಿತನಾದ ಪುಟ್ಟಯ್ಯ ಮಾವ ತಪ್ಪಾತು,,, ಕ್ಷಮಿಸಿ, ನಾನು ಇನ್ನೆಂದು ಹಾರ್ಮೋನಿಯಮ್ ಮುಟ್ಟುವುದಿಲ್ಲ ಎಂದನು. ಆಗ ಚಂದ್ರಶೇಖರಯ್ಯನವರು ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ, ನಿನ್ನದು ನಿನ್ನದೇ, ಅದು ನಿನ್ನ ಆಸ್ತಿ,, ಎಂದರು. ಇಲ್ಲಿ ಮಾವ ಅಳಿಯರ ಪ್ರೀತಿ ವಾತ್ಸಲ್ಯ ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ.	
31.	31. "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ" **ಉತ್ತರ :** ಈ ವಾಕ್ಯವನ್ನು ಡಾ. ಗುರುರಾಜ ಕರ್ಜಗಿರವರ ಕರುಣಾಳು ಬಾ ಬೆಳಕೆ ಅಂಕಣ ಬರೆಹದಿಂದ ಆರಿಸಲಾದ ಕಾಫೀ – ಕಪ್ಪು ಗದ್ಯ ಪಾಠದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಹೆಡ್‌ಮಾಸ್ತರರು ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ವಿದ್ಯಾರ್ಥಿಗಳು ಕಾಫೀ ಕುಡಿದ ನಂತರ ಗುರುಗಳೊಂದಿಗೆ ಬದುಕಿನ ತೊಂದರೆಗಳನ್ನು ಕುರಿತು ಮಾತನಾಡುತ್ತಾರೆ. ಆಗ ಗುರುಗಳು ಭಗವಂತ ತಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ ಅವನು ಕೊಡುವುದು ಈ ಕಾಫೀ ಮಾತ್ರ ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ. ಅಲಂಕಾರಗಳ ಬೆನ್ನುತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ. ಎಂದು ಹೇಳುತ್ತಾರೆ. ಗುರುಗಳು ವಿದ್ಯಾರ್ಥಿಗಳಿಗೆ ಕಾಫೀ–ಕಪ್ಪುಗಳ ನಿದರ್ಶನ ನೀಡುತ್ತಾ ಜೀವನದ ಪಾಠ ಹೇಳಿರುವುದು ಸ್ವಾರಸ್ಯಕರವಾಗಿದೆ.	

32.	**32. "ಅಮ್ಮನ ಮಾತು ಸುಳ್ಳಾಗದು"** **ಉತ್ತರ :** ಈ ವಾಕ್ಯವನ್ನು ಕುವೆಂಪುರವರ ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ ಆ ಮಾತನ್ನು ಗೋಪಾಲನು ಹೇಳಿದನು. ಗೋಪಾಲನು ಇಳಿ ಸಂಜೆಯಲ್ಲಿ ಶಾಲೆಯಿಂದ ಮರಳುವಾಗ ಕಾಡಿನಲ್ಲಿ ಭಯವಾಗಿ ಅಮ್ಮನ ಮಾತಿನಂತೆ ಬನದ ಗೋಪಾಲನನ್ನು ಕೂಗಿ ಕರೆಯುತ್ತಾನೆ. ಬನದ ಗೋಪಾಲನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಗೋಪಾಲನು 'ಅಮ್ಮ ಹೇಳಿದ್ದಳು, ನನ್ನಣ್ಣ ಇಲ್ಲಿಯೇ ದನ ಕಾಯುತ್ತಿರುವನಂತೆ. ದನ ಕಾಯುತ್ತಾ ಇನ್ನೆಲ್ಲಿಗೆ ಹೋದನೋ ಏನೋ? ಅಮ್ಮ ಹೇಳಿದ್ದಾಳೆ, ಇಲ್ಲಿಯೇ ಇರುತ್ತಾನಂತೆ. 'ಅಮ್ಮನ ಮಾತು ಸುಳ್ಳಾಗದು' ಎಂದು ಹೇಳುತ್ತಾನೆ. ಇಲ್ಲಿ ಗೋಪಾಲನಿಗೆ ತನ್ನ ಅಮ್ಮನ ಮಾತಿನ ಮೇಲೆ ಇರುವ ನಂಬಿಕೆ ಸ್ವಾರಸ್ಯಕರವಾಗಿ ಮೂಡಿ ಬಂದಿದೆ.	
33.	**33. "ಎಲ್ಲರೆದೆಗಳ ತುಂಬ ಸವಿಚೈತ್ರವು"** **ಉತ್ತರಃ** ಈ ವಾಕ್ಯವನ್ನು ಬಸವರಾಜ ಸಬರದ ಅವರ 'ಸಿಸಿಫಸರ ಸುತ್ತು' ಕವನ ಸಂಕಲನದಿಂದ ಆರಿಸಲಾದ 'ಸವಿಚೈತ್ರ' ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಜನರ ಮೇಲೆ ಚೈತ್ರಮಾಸವು ಬೀರುವ ಪರಿಣಾಮವನ್ನು ಕುರಿತು ಹೇಳುತ್ತಾರೆ. ಯುಗಾದಿ ಹಳತನ್ನು ಮರೆತು ಹೊಸತನವನ್ನು ತರುವ ಸಂಭ್ರಮದ ದಿನ ಬದುಕಿನಲ್ಲಿ ಕಷ್ಟ ಸುಖಗಳನ್ನು ಸಮನಾಗಿ ಸ್ವೀಕರಿಸುವುದರ ಪ್ರತೀಕವಾಗಿ ಬೇವು–ಬೆಲ್ಲವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತೇವೆ. ಆದರೂ ಯುಗಾದಿಯಲ್ಲಿ ಕಷ್ಟದ ಪ್ರತೀಕವಾದ ಬೇವಿನ ಕಹಿ ಕಡಿಮೆಯಾಗಿ, ಸಂತೋಷದ ಪ್ರತೀಕವಾದ ಬೆಲ್ಲದ ಸಿಹಿ ಹೆಚ್ಚಾದಂತೆ ಎಲ್ಲಾ ಜೀವಸಂಕುಲ ಉತ್ಸಾಹದಿಂದ ಇರುತ್ತದೆ. ಎಂದು ಕವಿ ವರ್ಣಿಸುವಾಗ ಎಲ್ಲರೆದೆಗಳ ತುಂಬ ಸವಿಚೈತ್ರವು ಎಂದು ಹೇಳಿದ್ದಾರೆ. ಇಲ್ಲಿ ಚೈತ್ರದ ವರ್ಣನೆ ಸ್ವಾರಸ್ಯಕರವಾಗಿದೆ.	

IX	**ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯುವುದುಃ** **(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)**	1x4=4
34.	**34.** ಏಕಾಂಗಿ ---------- ---------- ---------- ---------- ನಡೆದನು. **ಅಥವಾ** ಕಾಡು ಕಾಡು ---------- ---------- ---------- ---------- ಕಂಡಿತು **ಉತ್ತರ :** ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು. ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು. ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು. ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು. **ಅಥವಾ** ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು ಕೋಗಿಲೆಯ ಹಾಡೊಂದು ದೂರದಲ್ಲಿ ಕೇಳಿತು ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.	

X 35.	**ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸುವುದು:** **ವಿಷಯಾಂಶಕ್ಕೆ** **ಭಾಷಾಶೈಲಿ, ಪದ ಬಳಕೆಗೆ** **ಒಟ್ಟು** **35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ** **ಅಥವಾ** **ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮೆಚ್ಚುವ ಅಂಶಗಳೊಂದಿಗೆ ವಿವರಿಸಿ** **ಉತ್ತರಃ** ಕವಿ ಗೋಪಾಲಕೃಷ್ಣ ಅಡಿಗರು ಹೇಳಿದಂತೆ ಜೀವನದಲ್ಲಿ ಒಂದೇ ಒಂದು ಹೆಗ್ಗುರಿಯನ್ನು ಇಟ್ಟು ಕೊಂಡು ಅದನ್ನು ಸಾಧಿಸುವುದಕ್ಕಾಗಿ ಹಗಲಿರುಳು ಶ್ರಮಿಸಬೇಕು. ಒಂದು ಬಾಣಕ್ಕೆ ಗುರಿ ಒಂದೇ ಇರುವಂತೆ, ಒಂದು ದೇಹದಲ್ಲಿ ಆತ್ಮ ಒಂದೇ ಇರುವಂತೆ, ಜೀವನಕ್ಕೂ ಒಂದೇ ಗುರಿ ಇರಬೇಕೆಂದು ಹೇಳುತ್ತಾರೆ ನಾವು ಇಟ್ಟುಕೊಂಡ ಗುರಿ ನಮಗೂ, ದೇಶಕ್ಕೂ ಒಳ್ಳಯದನ್ನು ಬಯಸುವಂತಿರಬೇಕು. ಸ್ವಾರ್ಥಿಗಳಾಗಬಾರದು. ಇತರ ಜೀವಿಗಳನ್ನು ಬಳಲಿಸಬಾರದು. ಪ್ರತಿಯೊಬ್ಬ ಮಾನವನಲ್ಲಿ ದೈವತ್ವವನ್ನು ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕ್ಕಾಗಿ ಶ್ರಮಿಸಬೇಕು. ಇದುವೇ ಮನುಷ್ಯ ಜೀವನ. ಕಮಲ ಕೆಸರಿನಲ್ಲಿಯೇ ಹುಟ್ಟಿದ್ದರೂ ಮೇಲೆ ಬಾಂದವಳನ್ನು ನೋಡಿ ಸೂರ್ಯನ ಕಿರಣಗಳಿಗೆ ಅರಳಿ ದೇವರ ಮುಡಿ ಸೇರಿ ಜೀವನ ಸಾರ್ಥಕ ಮಾಡಿಕೊಳ್ಳತ್ತದೆ. ಅದೇ ರೀತಿ ಮಾನವನು ಅಚಲವಾದ ಹೆಗ್ಗುರಿಯನ್ನು ಹೊಂದಿ ಅದರ ಸಾಧನೆಗೆ ಹಗಲಿರುಳು ಶ್ರಮಿಸಬೇಕು. ಗುರಿ ಸಾಧನೆಯ ಪಥದಲ್ಲಿ ಯಾವುದೇ ಅಡ್ಡಿ–ಆತಂಕಗಳು ಬಂದರೆ ಅವುಗಳಿಗೆ ಹೆದರದೆ, ಧೃತಿಗೆಡದೆ ಅವುಗಳನ್ನು ಎದುರಿಸಿ ಮುನ್ನಡೆಯಬೇಕು. ಹಾಗೆಯೇ ಮಾನವನು ತನ್ನ ಕೀಳಿರಿಮೆಯನ್ನು ತೊರೆದು, ಜೀವನದ ಧ್ಯೇಯವನ್ನು ಸಾಧಿಸಲು ನಗುತ್ತಾ ಮುನ್ನುಗ್ಗಿದಾಗ ಜೀವನ ಸಾರ್ಥಕವಾಗುತ್ತದೆ ಎಂದು ಕವಿ ಹೇಳಿದ್ದಾರೆ. ಅಥವಾ **ಉತ್ತರ.** ಜೀವನಕ್ಕೆ ಒಂದು ಉತ್ತಮವಾದ ಗುರಿ ಇರಬೇಕು ಆಗ ಜೀವನ ಸಾರ್ಥಕತೆ ಹೊಂದುತ್ತದೆ. ಕಮಲ ಕೆಸರೊಳಗೆ ಹುಟ್ಟಿದರೂ ದೇವರ ಮುಡಿ ಸೇರಿ ಸಾರ್ಥಕತೆ ಪಡೆದುಕೊಳ್ಳುತ್ತದೆ. ರವಿ ಕಿರಣಗಳಿಗೆ ಮೆರೆದಾಡಿ ವಿಜೃಂಭಿಸುತ್ತದೆ. ಅದೇ ರೀತಿ ನಾವು ಸಹಿತ ಶ್ರೇಷ್ಟವಾದ ಗುರಿಯನ್ನು ತಲುಪಿ ಸಾರ್ಥಕತೆಯನ್ನು ಹೊಂದಬೇಕು. ಗುರಿಯನ್ನು ತಲುಪುವಾಗ ಯಾವುದೇ ಅಡಚಣೆಗಳು, ತೊಂದರೆಗಳು ಎದುರಾದಾಗ ಅವುಗಳಿಗೆ ಹೆದರುವ ಹೇಡಿತನವನ್ನು, ಹೆಣ್ತನವನ್ನು ತೋರಬಾರದು. ಹಿಡಿದ ದಾರಿಯಲ್ಲಿ ಗುರಿಯನ್ನು ತಲುಪಲು ಪೌರುಷದಿಂದ ಮುನ್ನಡೆಯಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುತ್ತದೆ. ಆದ್ದರಿಂದ ನಮ್ಮ ಜೀವನಕ್ಕೇಕೆ ಹಲವು ಸಾಧ್ಯಗಳು? ಒಂದೇ ಹೆಗ್ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸುವುದಕ್ಕೆ ಹಗಲಿರುಳು ಹೋರಾಡಬೇಕು. ನರನೊಳಗೆ ನಾರಯಣನ ರೂಪ, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರಹಿತಕಾರ್ಯ ಮಾಡುತ್ತಾ ಜೀವನ ನಡೆಸಬೇಕು ಆಗ ಮನುಷ್ಯ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸ್ವಾರ್ಥ ತುಂಬಿದ ಗುರಿಯನ್ನು ಹೊಂದಿದರೆ ಅದು ನಮಗೆ ಅಪಕೀರ್ತಿಯನ್ನು ತರುತ್ತದೆ ಎಂಬುದು ಗುರಿ ಪದ್ಯದ ಸಾರಾಂಶವಾಗಿದೆ.	1X4=4 3 ಅಂಕಗಳು 1 ಅಂಕ 4 ಅಂಕಗಳು

XI	**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು: (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** 36 ಪ್ರಶ್ನೆಗಳು **ಅ. ಗುರುದ್ವಾರಗಳ ಬಳಿ ಸ್ವಯಂ ಸೇವಕರು ಏನು ಮಾಡುತ್ತಿದ್ದಾರೆ?** **ಉತ್ತರ :** ದಿಲ್ಲಿಯಲ್ಲೋ ಧಗಧಗ ಬಿಸಿಲು. ಆದರೆ ಯಾರೋ ಪುಣ್ಯಾತ್ಮರು ಅಲ್ಲಿ ದೊಡ್ಡ ಮಣ್ಣಿನ ಮಡಿಕೆಗಳಲ್ಲಿ ನೀರು ತುಂಬಿಟ್ಟಿದ್ದರು. ಆನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್ಸು ಹಾಗೂ ದಾರಿಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನು ನೋಡಿದ್ದೇನೆ. **ಆ. ವಿದೇಶಗಳಲ್ಲಿ ಬಾಯಾರಿದಾಗ ಧಾರಾಳವಾಗಿ ಏನೇನು ದೊರೆಯುತ್ತದೆ?** **ಉತ್ತರ :** ಭಾರತದಿಂದ ಹೊರಗೆ ಕಾಲಿಟ್ಟರೆ, ಉಳಿದೆಲ್ಲವೂ 'ನೀರು ಕೊಡದ ನಾಡುಗಳು' ಎಂಬುದು ನನ್ನ ಇಲ್ಲಿಯವರೆಗಿನ ಅನುಭವ. ಎರಡು ವಾರ ಕಳೆದಿದೆ, ಊರೂರು ಅಲೆದಿದ್ದಾಯಿತು, ದಿನವೂ ಅಸಾಧ್ಯ ಬಾಯಾರಿಕೆ, ವಿದೇಶಗಳಲ್ಲಿ ಕೋಲಾಗಳು, ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತವೆ, ಕುಡಿಯಲು ನೀರು ಮಾತ್ರ ಸಿಗದು.	1x4=4 (2+2)

XII	ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ) ಪೀಠಿಕೆ / ಪ್ರಸ್ತಾವನೆ ವಿಷಯ ನಿರೂಪಣೆ ಭಾಷೆಶೈಲಿಗೆ, ಮುಕ್ತಾಯ / ಉಪಸಂಹಾರ	1x4=4 1 ಅಂಕ 2 ಅಂಕಗಳು 1 ಅಂಕ 4 ಅಂಕಗಳು
37.	37 ರಾಷ್ಟ್ರೀಯ ಭಾವೈಕ್ಯತೆ **ಅಥವಾ** ಶಿಕ್ಷಣದ ಮಹತ್ವ	

XIII	**ಪತ್ರ ಲೇಖನ ಬರೆಯುವುದು: (ಯಾವುದಾದರೂ ಒಂದಕ್ಕೆ ಮಾತ್ರ)** 38. ನೀವು ಕೋಲಾರ ಜಿಲ್ಲೆ ಸಂಗಮಪುರದ ನಿವಾಸಿ 'ಜಗದೀಶ' ಎಂದು ಭಾವಿಸಿಕೊಂಡು ನಿಮ್ಮ ಊರಿನಲ್ಲಿನ ಬೀದಿ ದೀಪಗಳನ್ನು ಸರಿಪಡಿಸಿ ಕೊಡುವಂತೆ ಕೋರಿ ಕೋರಿ, ಗ್ರಾಮ ಪಂಚಾಯತಿಯ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ **ಅಥವಾ** ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಮೋಕ್ಷ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವದ ಬಗ್ಗೆ ಮೈಸೂರಿನ ಕುವೆಂಪು ಬಡಾವಣೆಯಲ್ಲಿ ವಾಸವಾಗಿರುವ 'ಶ್ರೇಯಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ. **ವೈಯಕ್ತಿಕ ಪತ್ರ :** ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ ಪತ್ರದ ಒಡಲು ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ ವಿನ್ಯಾಸ, ಪದಬಳಕೆ, ಶೈಲಿ ಒಟ್ಟು ಅಥವಾ **ವ್ಯಾವಹಾರಿಕ ಪತ್ರ :** ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ ಪತ್ರದ ಒಡಲು ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ ವಿನ್ಯಾಸ, ಪದಬಳಕೆ, ಶೈಲಿ ಒಟ್ಟು	1x5=5 1 ಅಂಕ 2 ಅಂಕಗಳು 1 ಅಂಕ 1 ಅಂಕ 5 ಅಂಕಗಳು 1 ಅಂಕ 2 ಅಂಕಗಳು 1 ಅಂಕ 1 ಅಂಕ 5 ಅಂಕಗಳು